ಮಂಡಿ ಕುಮಾರ್, ಬೆಂಗಳೂರು

ಸಾವಿನ ಸಮಯದಲ್ಲೂ ನಗುವ ವ್ಯಕ್ತಿ ಯಾರು?



ತಾಯ್ನಾಡ ಸೇವೆ ಮಾಡಿದ ತೃಪ್ತನಗೆ ಬೀರುವ ಸೈನಿಕ.

ಸಿಪಿಮೊಗೆ ರಮೇಶ್, ಮೈಸೂರು

ಕಟ್ಟಿಕೊಂಡವಳ ಜೊತೆ ಬಾಳ್ವೆ ನಡೆಸಲು ಆಗದವರು ಇಟ್ಟುಕೊಂಡವಳೊಡನೆ ನಿಜಕ್ಕೂ ನೆಮ್ಮದಿಯಿಂದಿರುವರೆ?

ಸಾಧ್ಯ; ಚಿನ್ನ, ಪ್ಲಾಟಿನಂ ನೊಡನೆ ಹೊಂದದ ಗಂಧಕ ಮಿಕ್ಕೆಲ್ಲದರೊಡನೆ ಹೊಂದುತ್ತದೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಮಿಂಚು ಬಂದ ಬಳಿಕವೇ ಗುಡುಗು ಬರುತ್ತದೆ. ಏಕೆ?

ವರುಣನೆಂಬ ರೈನ್–ಡ್ರೈವರ್ ಮೊದಲು ಹೆಡ್‌ಲೈಟ್ಸ್ ಫ್ಲ್ಯಾಷ್ ಮಾಡಿ ಆಮೇಲೆ ಹಾರನ್ ಹೊಡೆಯುವನಂತೆ.

ಆರ್. ಮಧುಸೂದನ್, ಹಾಸನ

ಹಂಚಿಕೊಂಡು ತಿನ್ನುವ ಶ್ರೇಷ್ಠ ಗುಣವಿರುವ ಕಾಗೆಯನ್ನು ಮನುಷ್ಯ ಕೀಳಾಗಿ ನೋಡುವುದೇಕೆ?



ಗುಣವಂತರನ್ನು ಕಂಡರೆ ಗುಣಹೀನರಿಗೆ ಮತ್ಸರಜನ್ಯ ತಾತ್ಸಾರ ಇರುತ್ತದೆ.

ಬಿ.ಆರ್. ಉಷಾ, ಬೆಂಗಳೂರು

ತಿನ್ನಲು ಇಲ್ಲದೆ ಸಣ್ಣಗಿರುವುದಕ್ಕೂ, ಡಯಟ್ ಮಾಡಿ ಸಣ್ಣಗಿರುವುದಕ್ಕೂ ವ್ಯತ್ಯಾಸವೇನು?

ಇದು ಸಾಮಾಜಿಕ ವೈಫಲ್ಯ; ಅದು ವೈಯಕ್ತಿಕ ಚಾಪಲ್ಯ.

ಎಂ.ಎಸ್. ಮಂಜರ್, ಬಂಡಳ್ಳಿ

ಮಾಸ್ಕ್ ಧರಿಸಿದ ಮೇಲೂ ಹೆಂಗಸರ ಮಾತು ಜಾಸ್ತಿ ಆಗಿದೆಯಲ್ಲಾ...?

ಗುಡ್. ಕೊರೊನಾಭರಿತ ಟೀವಿಗಳಿಗಿಂತ ಇವರ ಬಣ್ಣಬಣ್ಣದ ಮಾತುಗಳೇ ವಾಸಿ.

ದೇವೇಂದ್ರ, ಕಡೂರು

ಬದುಕಿನಲ್ಲಿ ನಿಜವಾದ ಸಿರಿತನ ಯಾವುದು ಸರ್?

ಸಿರಿದಾಹ ಇಲ್ಲದಿರುವುದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ರಾಖಿ ಹಬ್ಬದ ಸಮಯದಲ್ಲಿ ಪ್ರೇಮಿಗಳು ಏಕೆ ಕಾಣುವುದಿಲ್ಲ?

ಬ್ಯೂಟಿಫುಲ್ ಬೇಬ್‌ಗಳು ಭಯ್ಯಾ ಎಂದುಬಿಟ್ಟಾರೆಂಬ ಭಯ.

ಮೋಹನರಾಜು ಎಸ್.ಎ. ಶಂಕರಘಟ್ಟ

ಕತ್ತಲೆಯಿಂದ ಕತ್ತಲೆಯನ್ನು ಓಡಿಸಲು ಸಾಧ್ಯವೆ?

ಹೂಂ. ಅಜ್ಞಾನದ ಕತ್ತಲೆಯು ಮೌಢ್ಯದ ಕತ್ತಲೆಯನ್ನು ಚೆನ್ನಾಗಿ ಓ(ಡಾ)ಡಿಸುತ್ತಲೇ ಇದೆ.

ಮಹಾವೀರ ಕಾಸರ, ಶಿವಮೊಗ್ಗ

ರಾಜಕಾರಣ ಪುಲ್ಲಿಂಗವೋ ಸ್ತ್ರೀಲಿಂಗವೋ?

ಪುಲ್ಲಿಂಗ್ ಪವರ್ ಇರುವ ಕಷ್ಟಲಿಂಗ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುವವನು ಬಡವ. ಆದಾಯವಿಲ್ಲದೆ ಖರ್ಚು ಮಾಡುವವನು?

ಮಂತ್ರಿಪುತ್ರ.

ರಾಜಶೇಖರ ಹಾದಿಮನಿ, ಧಾರವಾಡ

ಶ್ರೀಸಾಮಾನ್ಯನ ಸೇವೆ ಮಾಡಬೇಕಾದ ಜನಪ್ರತಿನಿಧಿಗಳು ಅವನ ಮೇಲೆ ಸವಾರಿ ಮಾಡುವುದು ಸರಿಯೆ?

ತಪ್ಪು ಅವನದಲ್ಲ, ಸವಾರಿ ಮಾಡಲು ಸುಲಭವಾಗುವಂತೆ ಬಗ್ಗಿ ನಿಲ್ಲುವ ಜನರದು.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ಮಧುಚಂದ್ರ ಇರುವಂತೆ ಮಧುಸೂರ್ಯ ಏಕಿಲ್ಲ?

ಮಧುವಿಗೆ ಪ್ರಖರ ಶಾಖ ತಗುಲಿದರೆ ಸ್ವಾರಸ್ಯವೇ ನಾಶವಾಗುವುದರಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ನೀರಿನ ಹರಿವು ತಗ್ಗಿನೆಡೆಗೆ. ಪ್ರೀತಿಯ ಹರಿವು?

ತಗ್ಗಿ ಬಗ್ಗುವ ನಡೆಗೆ.

## ವಾರದ ಪ್ರಶ್ನೆ

ಕವಿತಾ ವೆಂಕಟೇಶ್, ಊರಿಲ್ಲ

ಗ್ರಹಣವನ್ನು ವೈಜ್ಞಾನಿಕವಾಗಿ ನಂಬಬಹುದು; ಗ್ರಹಚಾರವನ್ನು ಹೇಗೆ ನಂಬಲು ಸಾಧ್ಯ?

‘ಬನ್ನಿ ನಂಬಿಸುತ್ತೇನೆ’ ಎಂದರಂತೆ ಅಮೋಘ ಬ್ರಹ್ಮಾಂಡಿಗಳು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಭಕ್ತಿಗೂ ಶಕ್ತಿಗೂ ಏನು ವ್ಯತ್ಯಾಸ?

ಭಕ್ತ ‘ತಂದೇ...’ ಎನ್ನುತ್ತಾನೆ; ಶಕ್ತಿವಂತ ‘ಮಗನೇ...’ ಎನ್ನುತ್ತಾನೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಬೀದಿನಾಯಿಗೆ ಕಲ್ಲು ಹೊಡೆದರೆ ಗದ್ದಲ ಮಾಡುವವರು ಕುರಿಯನ್ನು ಕೊಚ್ಚಿದರೆ ಮೌನವಾಗಿರುತ್ತಾರಲ್ಲಾ?

‘ಕುರಿ ಫುಡ್ಡು; ನಾಯಿ ಫ್ರೆಂಡು’ ಎನ್ನುವುದು ಅವರ ನಿಲುವಂತೆ.

ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ

ಸೂಜಿಯೊಳಗೆ ದಾರ ಹೋಗುತ್ತಿಲ್ಲವಲ್ಲಾ?



ಅಷ್ಟು ಕುಡಿಯಬೇಡಿ, ಕೈ ನಡುಕ ಬರತ್ತೆ ಅಂತ ಅವತ್ತೇ ಹೇಳಿದ್ದೆ.

ರಾಘವೇಂದ್ರ ಪಿ.ಜಿ. ಮೈಸೂರು

ಜನಪ್ರತಿನಿಧಿಗಳಿಗೆ ಇಲ್ಲದ ಕೋವಿಡ್ ನಿಯಮಗಳು ಜನಸಾಮಾನ್ಯರಿಗೇಕೆ ರಾಮ್?

ಸೋಂಕು ಕೇವಲ ಮನುಷ್ಯರಿಗೆ ಮಾತ್ರ ಹರಡುವುದಂತೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

ಓದುವ, ಬರೆಯುವ ತುಡಿತ ಕಡಿಮೆಯಾಗುತ್ತಿದೆ ಎಂಬ ಆತಂಕ ಕಾಡುತ್ತಿದೆಯಲ್ಲ ಸಾರ್?

ಜ್ಯೋತಿಷ್ಯ ಕಾರ್ಯಕ್ರಮ ನೋಡಿ. ಅವರಾಡುವ ಸುಳ್ಳುಗಳು ಸತ್ಯವನ್ನು ತಿಳಿಯುವ/ತಿಳಿಸುವ ತುಡಿತ ಹೆಚ್ಚಿಸುತ್ತವೆ.

■ **ರಾಮ್**

ನೀವೂ ಪ್ರಶ್ನೆ ಕಳಿಸಿ: editorsu@sudha.co.in